ಅಸಲು ದಾವಾ ಸಂಖ್ಯೆ. 60/2015

ಪಿ.ಡಬ್ಲು. 1

**ಸಾಕ್ಷಿಯನ್ನು ದಿನಾಂಕಃ 27.07.2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ.ಎಂ.ವಿ., ಪ್ರತಿವಾದಿ ನಂ.3, 8 ಮತ್ತು 9 ಪರ ವಕೀಲರಿಂದ ಃ**

ದಾವಾ ಜಮೀನು ಹನಮಂತ ಇವರ ಹೆಸರಿಗೆ ಎ.ಸಿ. ಇವರು ಮಂಜೂರು ಮಾಡಿದ್ದರು ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿ ಲಕ್ಷ್ಮಪ್ಪನ ನಾಲ್ಕು ಮಕ್ಕಳಿಗೆ ಜಂಟಿಯಾಗಿ ಮಂಜೂರು ಮಾಡಿದ್ದರು ಎಂದು ನುಡಿಯುತ್ತಾರೆ. ನಾಲ್ಕು ಜನರಿಗೆ ಜಂಟಿಯಾಗಿ ಮಂಜೂರು ಮಾಡಿದ್ದರ ಕುರಿತು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ನನ್ನ ತಂದೆ ಜೀವಿತ ಕಾಲದಲ್ಲಿ ದಾವಾ ಆಸ್ತಿಯಲ್ಲಿ ಅವರಿಗೂ ಹಕ್ಕು ಇದೆ ಎಂದು ಕಾನೂನು ಕ್ರಮ ಕೈಗೊಂಡಿರಲಿಲ್ಲ. ಅದೇ ರೀತಿ ನನ್ನ ತಂದೆ ಸಹೋದರರಾದ ಸೈದಪ್ಪ ಮತ್ತು ಬಸಪ್ಪ ಕೂಡಾ ಸದರಿ ದಾವಾ ಆಸ್ತಿಯಲ್ಲಿ ಅವರ ಹಕ್ಕು ಇದೆ ಎಂದು ಕಾನೂನು ಕ್ರಮ ಕೈಗೊಂಡಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ.

ನನ್ನ ತಂದೆ ಮೃತನಾದ ನಂತರ ದಾವಾ ಆಸ್ತಿಯ ಕಂದಾಯ ದಾಖಲೆಗಳಲ್ಲಿ ನನ್ನ ಹೆಸರು ವಾರಸಾ ನಾತೆಯಿಂದ ದಾಖಲಿಸಿಕೊಳ್ಳಲು ಯಾವುದೇ ಅರ್ಜಿ ಸಲ್ಲಿಸಿಲ್ಲ ಮುಂದುವರೆದು ಸಾಕ್ಷಿ ಆವಾಗ ಯಾವುದೇ ತಕರಾರು ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಮರಣ ಪ್ರಮಾಣ ಪತ್ರ ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿರಬಹುದು. ನನ್ನ ತಂದೆಗಿಂತ ಮೊದಲೇ ಹನಮಂತ ಇವರು ಮೃತನಾಗಿದ್ದಾನೆ ಎಂದರೆ ಸರಿ. ಹನಮಂತ ಇವರಿಗೆ ಮೂರು ಜನ ಹೆಣ್ಣು ಮಕ್ಕಳು ಮಾತ್ರ ಇದ್ದರು. ಹನಮಂತ ಇವರಿಗೆ ಹೆಣ್ಣು ಮಕ್ಕಳು ಇದ್ದಾರೆ ಎಂಬ ಕಾರಣಕ್ಕೆ ಸೈದಪ್ಪ ಮತ್ತು ಬಸಪ್ಪ ಅವರಿಗೆ ಸಹಾಯ ಮಾಡುತ್ತಿದ್ದರು ಎಂದರೆ ಸರಿ.

ಹನಮಂತ ಮೃತನಾದ ನಂತರ ದಾವಾ ಆಸ್ತಿಯಲ್ಲಿ ಆತನ ಹೆಂಡತಿ ಮಕ್ಕಳು ಹಾಗೂ ಆತನ ಸಹೋದರಾದ ಸೈದಪ್ಪ ಮತ್ತು ಬಸಪ್ಪ ಇವರ ಹೆಸರು ದಾಖಲಾದವು ಎಂದರೆ ಸರಿ. ಡೈರಿ ನಂ.4147 ರ ಪ್ರಕಾರ ದಾಖಲಾದವು ಎಂದರೆ ಸರಿ. ನನ್ನ ತಂದೆ ಮನಗಾನೆಪ್ಪ ಆತನ ಹೆಸರು ದಾಖಲಾಗಿರಲಿಲ್ಲ ಮುಂದುವರೆದು ಸಾಕ್ಷಿ ನನ್ನ ತಂದೆ ಕುರಿ ಕಾಯುತ್ತ ಹೋಗುತ್ತಿದ್ದ ಆ ಕಾರಣಕ್ಕೆ ದಾಖಲಾಗಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಹನಮಂತ ಮೃತನಾದ ನಂತರ ದಾವಾ ಆಸ್ತಿಯಲ್ಲಿ ಆತನ ಹೆಂಡತಿ ಮಕ್ಕಳು ಹಾಗೂ ಆತನ ಸಹೋದರಾದ ಸೈದಪ್ಪ ಮತ್ತು ಬಸಪ್ಪ ಇವರ ಹೆಸರು ಡೈರಿ ನಂ.4147 ರ ಪ್ರಕಾರ ದಾಖಲಾದ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿ ಅದನ್ನು ಕೊಟ್ಟರೀತಿಯಲ್ಲಿ ದಾಖಲಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ಬಸಪ್ಪ, ಸೈದಪ್ಪ ಡೈರಿ ನಂ.4147 ರ ಪ್ರಕಾರ ಅವರಿಗೆ ಏನು ಹಕ್ಕು ಇಲ್ಲದಿದ್ದರು ಸಹಿತ ಕೊಟ್ಟರೀತಿಯಾಗಿ ತಮ್ಮ ಹೆಸರು ದಾಖಲಿಸಿಕೊಂಡಿದ್ದರ ಕುರಿತು ಮೃತ ಹನಮಪ್ಪನ ಹೆಂಡತಿ ದಾವಾ ಆಸ್ತಿಯಲ್ಲಿ ತಾನೆ ಮಾಲೀಕಳು ಮತ್ತು ಹನಮಂತನ ವಾರಸುದಾರಳೆಂದು ಅಸಲ ದಾವಾ ನಂ.223/1989 ದಾವೆ ದಾಖಲಿಸಿದ್ದರು ಎಂದರೆ ನನಗೆ ಮಾಹಿತಿ ಇಲ್ಲ.

ಈ ದಾವೆ ನಡೆಸಲು ನನ್ನ ತಂದೆ ಮನಗಾನೆಪ್ಪ ಸಹಿತ ಮೃತ ಹನಮಂತನ ಹೆಂಡತಿ ಜೊತೆ ನ್ಯಾಯಾಲಯಕ್ಕೆ ಬರುತ್ತಿದ್ದ ಮತ್ತು ಆ ವಿಷಯ ನನಗೂ ಗೊತ್ತಿತ್ತು ಎಂದರೆ ಸರಿಯಲ್ಲ.

ದಿನಾಂಕಃ 30.11.1992 ರಂದು ಅಸಲ ದಾವಾ ಸಂಖ್ಯೆ 223/1989 ಇದಿಎ ಮೈತ ಹನಮಂತನ ಹೆಂಡತಿ ಪರವಾಗಿ ಡಿಕ್ರಿ ಆಯಿತು ಎಂದರೆ ನನಗೆ ಗೊತ್ತಿಲ್ಲ. ಅಸಲದಾವಾ ಸಂಖ್ಯೆ 223/1989 ರಲ್ಲಿನ ಆದೇಶ ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಆರ್.ಎ. ನಂ.02/1993 ದಾಖಲಿಸಿದ್ದರ ಬಗ್ಗೆ ನನಗೆ ಗೊತ್ತಿಲ್ಲ ಸದರಿ ಮೇಲ್ಮನವಿ ದಿನಾಂಕಃ 13.09.2001 ರಂದು ವಜಾಗೊಂಡಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ.

ಪ್ರಸ್ತುತ ದಾವೆಯ ದಾವಾ ಆಸ್ತಿಯು ಮೈತ ಹನಮಂತ ಮತ್ತು ಆತನ ನಂತರ ಆತನ ಹೆಂಡತಿ ಮಕ್ಕಳ ಆಸ್ತಿಯೆಂದು ಈಗಾಗಲೇ ಅಸಲದಾವಾ ಸಂಖ್ಯೆ 223/1989 ಮತ್ತು ಆರ್.ಎ. ನಂ.02/1993 ಆದೇಶ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಸಲ ದಾವಾ ಸಂಖ್ಯೆ 223/1989 ಮತ್ತು ಆರ್.ಎ. ನಂ.02/1993 ನಲ್ಲಿ ಆದ ಆದೇಶದ ಮೇರೆಗೆ ಸೈದಪ್ಪ ಮತ್ತು ಬಸಪ್ಪ ಇವರ ಹೆಸರು ದಾವಾ ಆಸ್ತಿಯ ದಾಖಲೆಗಳಲ್ಲಿ ಕಡಿಮೆ ಮಾಡಲಾಗಿದೆ ಎಂದರೆ ಸಾಕ್ಷಿ ಮೊಸತನದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ಸದರಿ ಅಸಲ ದಾವಾ ಸಂಖ್ಯೆ 223/1989 ಮತ್ತು ಆರ್.ಎ. ನಂ.02/1993 ನಲ್ಲಿ ಆದ ಆದೇಶದ ಮೇರೆಗೆ ಸೈದಪ್ಪ ಮತ್ತು ಬಸಪ್ಪ ಇವರ ಹೆಸರು ದಾವಾ ಆಸ್ತಿಯ ದಾಖಲೆಗಳಲ್ಲಿ ಕಡಿಮೆ ಮಾಡಲಾದ ವಿಷಯ ನನಗೆ ಮತ್ತು ನನ್ನ ತಂದೆಗೆ ಗೊತ್ತಿತ್ತು ಎಂದರೆ ಸರಿಯಲ್ಲ.

ಹನಮಂತನ ಮಗಳು ಮಾಯವ್ವ ಇವಳು ದಿನಾಂಕಃ 28.08.1988 ರಂದು ಮರಣ ಹೊಂದಿದಳು ಎಂದರೆ ನನಗೆ ಗೊತ್ತಿಲ್ಲ ಸದರಿ ಮಾಯವ್ವಳಿಗೆ ಗಂಡ ಬಸಪ್ಪ ಕೂಂಚನೂರು, ಹೆಣ್ಣುಮಕ್ಕಳಾದ ಪ್ರತಿವಾದಿ ನಂ.5 ರಿಂದ 7 ಮತ್ತು ಗಂಡುಮಕ್ಕಳಾದ ಪ್ರತಿವಾದಿ ನಂ.8 ಮತ್ತು 9 ಇದ್ದಾರೆ ಎಂದರೆ ಸರಿ.

ಹನಮಂತನ ಇನ್ನೊಬ್ಬ ಮಗಳು ಎಲ್ಲವ್ವ ಕೂಡಾ ತನ್ನ ವಾರಸುದಾರರನ್ನು ಬಿಟ್ಟು ಮೈತಳಾದಳು ಎಂದರೆ ಸರಿ. ಹನಮಂತನ ಇನ್ನೊಬ್ಬ ಮಗಳ ರುಕ್ಮವ್ವ ಪ್ರತಿವಾದಿ ನಂ.4 ಜೀವಿತ ಇದ್ದಾರೆ.

ದಾವಾ ಜಮೀನಿನಲ್ಲಿ ಮೈತ ಮಾಯವ್ವ ಮತ್ತು ಲಕ್ಷ್ಮವ್ವನ ವಾರಸುದಾರರು ಹಾಗೂ ಪ್ರತಿವಾದಿ ನಂ.4 ಇವಳ ಹೆಸರು ಮಾತ್ರ ದಾಖಲಿತ್ತು ಎಂದರೆ ಸರಿ. ಡೈರಿಗಳನ್ನು ನಾನು ಪ್ರಶ್ನಿಸಿ ಯಾವುದೇ

ಅರ್ಜಿ ದಾಖಲಿಸಿಲ್ಲ.

ಮೃತ ಮಾಯವ್ವ ಮತ್ತು ಲಕ್ಷ್ಮವ್ವನ ವಾರಸುದಾರರು ಹಾಗೂ ಪ್ರತಿವಾದಿ ನಂ.4 ಇವರ ಮನೆತನಕ್ಕೆ ಸಿದ್ದಪ್ಪ ಕುಂಚನೂರು ಇವರು ಸಹಾಯ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೃತ ಮಾಯವ್ವ ಮತ್ತು ಲಕ್ಷ್ಮವ್ವನ ವಾರಸುದಾರರು ಹಾಗೂ ಪ್ರತಿವಾದಿ ನಂ.4 ಇವರು ದಾವಾ ಜಮೀನಿಗೆ ಕರ ಕಟ್ಟದೇ ಇದ್ದ ಕಾರಣ ದಾವಾ ಜಮೀನಿನ ದಾಖಲೆಗಳಲ್ಲಿ ಸರ್ಕಾರದ ಹೆಸರು ದಾಖಲಾಗಿತ್ತು ಎಂದರೆ ಸಾಕ್ಷಿ ಕರ ಕಟ್ಟಲು ಹಣ ನೀಡುತ್ತಿದ್ದೇವು ಆದರೆ ಅವರು ಕಟ್ಟಿರಲಿಲ್ಲ ಎಂದು ನುಡಿಯುತ್ತಾರೆ.

ಎಷ್ಟು ಹಣ ಕೊಡುತ್ತಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ಹತ್ತು ಇಪ್ಪತ್ತು ಎಂದು ನುಡಿಯುತ್ತಾರೆ. ಈ ಕುರಿತು ಯಾವುದೇ ರಶೀದಿ ಪಡೆದುಕೊಂಡಿಲ್ಲ. ದಾವಾ ಆಸ್ತಿಯಲ್ಲಿ ಸರ್ಕಾರದ ಹೆಸರು ದಾಖಲಾದ ಬಗ್ಗೆ ನನ್ನ ತಂದೆಗೆ ಗೊತಾಯಿತು ಎಂದರೆ ಸರಿ. ಆಗ ನನ್ನ ತಂದೆ ಸರ್ಕಾರದ ಹೆಸರು ಕಡಿಮೆ ಮಾಡಲು ಕೈಗೊಂಡ ಕ್ರಮದ ಬಗ್ಗೆ ನನಗೆ ಮಾಹಿತಿ ಇಲ್ಲ. ದಿನಾಂಕಃ 16.08.2001 ರಂದು ಮಾಯವ್ವ ಇವಳು ಎಂ.ಆರ್. 18614 ಪ್ರಕಾರ ಸರ್ಕಾರಕ್ಕೆ ಹಣ ಪಾವತಿಸಿ ದಾವಾ ಆಸ್ತಿಯಲ್ಲಿನ ಸರ್ಕಾರದ ಹೆಸರನ್ನು ಕಡಿಮೆ ಮಾಡಿಸಿಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ. ಸಿದ್ದಪ್ಪ ಅಂಬಣ್ಣ ಕುಂಚನೂರು ಇತನ ಹೆಸರು ದಾವಾ ಜಮೀನಕ್ಕೆ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ಡೈರಿ 18783 ಪ್ರಕಾರ ಸಿದ್ದಪ್ಪ ಕುಂಚನೂರು ಇತನ ಹೆಸರು ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿನ ನಂ.3 ಮತ್ತು 4 ಇವರ ಮದುವೆ ಸಿದ್ದಪ್ಪ ಅಂಬಣ್ಣ ಕುಂಚನೂರ ಇವರು ಮಾಡಿಸಿದ್ದರಿಂದ ಹಾಗೂ ಲಕ್ಕವ್ವ ಅನ್ನುವವರು ತನ್ನ ಹೆಸರಿಗೆ ನೋಂದಾಯಿತ ಮೃತ್ಯಪತ್ರ ದಿನಾಂಕಃ 03.081992 ರಂದು ಬರೆದುಕೊಟಿದ್ದರಿಂದ ಆ ನಂತರ ಮಾಯವ್ವ ಬಸಪ್ಪ ಕುಂಚನೂರು ಇವರು ತನ್ನ ಹೆಸರಿಗೆ ಒಪ್ಪಿಗೆ ಪತ್ರ ದಿನಾಂಕಃ 27.11.2002 ರಂದು ಬರೆದುಕೊಟಿದ್ದು ಆ ಪ್ರಕಾರ ಸಿದ್ದಪ್ಪ ಅಂಬಣ್ಣ ಕುಂಚನೂರು ಇವನ ಹೆಸರು ದಾವಾ ದಾಖಲೆಯಲ್ಲಿ ದಾಖಲಾಗಿತ್ತು ಎಂದರೆ ಸಾಕ್ಷಿ ಅದು ತಪ್ಪಾಗಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ಈ ಕುರಿತು ನಾನಾಗಲಿ ಅಥವಾ ನನ್ನ ತಂದೆಯಾಗಲಿ ಸಿದ್ದಪ್ಪ ಅಂಬಣ್ಣ ಕುಂಚನೂರ ಇತನ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ.

ಸಿದ್ದಪ್ಪ ಅಂಬಣ್ಣ ಕುಂಚನೂರ ಮೃತನಾದ ಮೇಲೆ ದಾವಾ ಜಮೀನಿನ ದಾಖಲೆಗಳಲ್ಲಿ ಪ್ರತಿವಾದಿ ನಂ.20 ರಿಂದ 28 ಹೆಸರು ದಾಖಲಾಯಿತು ಎಂದರೆ ನನಗೆ ಗೊತ್ತಿಲ್ಲ. ಮೃತ ಹನಮಂತನ ವಾರಸುದಾರರು ದಾವಾ ಜಮೀನಿಗೆ ತಾವು ಮಾಲಕರು ಎಂದು ಪ್ರಸ್ತುತ ದಾವೆಯ ಪ್ರತಿವಾದಿ ನಂ.20 ರಿಂದ 28 ರ ವಿರುದ್ಧ ಮುಧೋಳ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲ ದಾವಾ ಸಂಖ್ಯೆ 02/2013 ರನ್ನು ದಾಖಲಿಸಿದ್ದರು ಎಂದು ನನಗೆ ಗೊತ್ತಿಲ್ಲ.

ಸದರಿ ಅಸಲ ದಾವಾ ನಂ.02/2013 ರಲ್ಲಿಯು ಸಹ ದಾವಾ ಜಮೀನಿಗೆ ಮೃತನ ಹನಮಂತನ

ಹೆಂಡತಿ ಮಕ್ಕಳೆ ಮಾಲೀಕರು ಎಂದು ಆದೇಶ ಆಯಿತು ಎಂದರೆ ನನಗೆ ಗೊತ್ತಿಲ್ಲ.

ಸದರಿ ಆದೇಶ ಪ್ರಶ್ರೀಸಿ ಸಿದ್ದಪ್ಪ ಕುಂಚನೂರು ಇತನ ವಾರಸುದಾರರು ಮಾನ್ಯ ಉಚ್ಛನ್ಯಾಯಾಲಯದಲ್ಲಿ ಆರ್.ಎಫ್.ಎ ನಂ.100170/2014 ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 28.08.2023 ರಂದು ಮಾನ್ಯ ಉಚ್ಛ ನ್ಯಾಯಾಲಯ ಇವರು ಅಸಲ ದಾವಾ ಸಂಖ್ಯೆ 02/2013 ರಲ್ಲಿ ಆದೇಶ ಮತ್ತು ಡಿಕ್ರಿಯನ್ನು ಎತ್ತಿಹಿಡಿದು ಆರ್.ಎಫ್.ಎ ನಂ.100170/2014 ನ್ನು ವಜಾ ಗೋಳಿಸಿತ್ತು ಎಂದರೆ ನನಗೆ ಮಾಹಿತಿ ಇಲ್ಲ.

ದಾವಾ ಜಮೀನಿನಲ್ಲಿ ನನಗೂ ಪಾಲು ಬರುತ್ತದೆ ಎಂದು ಪ್ರಸ್ತುತ ದಾವೆ ದಾಖಲಿಸಿರುತ್ತೇನೆ. ನನ್ನ ತಂದೆಯ ಮುಖಾಂತರ ನಾನು ದಾವಾ ಜಮೀನಿನಲ್ಲಿ ಪಾಲು ಕೇಳುತ್ತಿದ್ದೇನೆ ಎಂದರೆ ಸರಿ. ನನ್ನ ತಂದೆಗೆ ದಾವಾ ಆಸ್ತಿಯಲ್ಲಿ ಯಾವ ರೀತಿ ಹಕ್ಕು ಪ್ರಾಪ್ತಿಯಾಗಿತ್ತು ನಾನು ಈಗ ಹಕ್ಕು ಚಲಾಯಿಸುತ್ತಿದ್ದೇನೆ ಎಂಬ ಪ್ರಶ್ನೇಗೆ ಸಾಕ್ಷಿ ಎಲ್ಲರೂ ಕೂಡಿ ಇದ್ದಾಗ ದಾವಾ ಜಮೀನು ಮಂಜೂರು ಆಗಿದ್ದರಿಂದ ಎಂದು ನುಡಿಯುತ್ತಾರೆ.

ದಾವಾ ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ನನ್ನ ತಂದೆ ನೋಡುತ್ತಾ ಬಂದಿರಲಿಲ್ಲ. ಮುಂದುವರೆದು ಸಾಕ್ಷಿ ಮನೆತನದ ವ್ಯೆವಹಾರ ಮೃತ ಹನಮಂತ ನೋಡಿಕೊಳ್ಳುತ್ತಿದ್ದ ಎಂದು ನುಡಿಯುತ್ತಾರೆ. ಹನಮಂತ ಮೃತನಾದ ಮೇಲೆ ನನ್ನ ತಂದೆ ಮನೆ ಜವಾಬ್ದಾರಿ ತೆಗೆದುಕೊಂಡಿರಲಿಲ್ಲ.

ನನ್ನ ತಂದೆ ಮೃತನಾದ ಮೇಲೆ ನಾನು ದಾವಾ ಜಮೀನಿನ ಸ್ಥಿತಿಗತಿ ಬಗ್ಗೆ ವಿಚಾರಿಸುತ್ತಿರಲಿಲ್ಲ. ನನ್ನ ತಂದೆ ಮನಗಾನೆಪ್ಪ ಹೆಸರಲ್ಲಿ ಏನು ಆಸ್ತಿಗಳು ಇವೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನನ್ನ ಹೆಸರಲ್ಲಿ ಜಮೀನು ಇದೆ.

ನನ್ನ ಆಸ್ತಿಗಳನ್ನು ಈ ದಾವಾ ಆಸ್ತಿಗಳಲ್ಲಿ ಸೇರಿಸಿಲ್ಲ ಮುಂದುವರೆದು ಸಾಕ್ಷಿ ಅವು ನಾನು ಸ್ವಂತ ಗಳಿಸಿದ ಆಸ್ತಿ ಎಂದು ನುಡಿಯುತ್ತಾರೆ. ಸೈದಪ್ಪ ಮತ್ತು ಬಸಪ್ಪ ಹಾಗೂ ಅವರ ಮಕ್ಕಳ ಹೆಸರಲ್ಲಿ ಆಸ್ತಿಗಳು ಎಷ್ಟೆಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಆ ಕುರಿತು ವಿಚಾರಣೆ ಮಾಡಿಲ್ಲ. ಮೃತ ಹನಮಂತನ ಮಕ್ಕಳು ದಾವಾ ದಾಖಲಿಸಿದಾಗ ಸೈದಪ್ಪ ಮತ್ತು ಬಸಪ್ಪ ಇವರು ಸದರಿ ಆಸ್ತಿಗಳು ಏಕತ್ರ ಕುಟುಂಬದ ಆಸ್ತಿಗಳು ಎಂದು ನ್ಯಾಯ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಾವಾ ಜಮೀನು ಮೃತ ಹನಮಂತನ ಹೆಂಡತಿ ಮಕ್ಕಳ ಆಸ್ತಿಯೆಂದು ಈಗಾಗಲೇ ಎರಡು ನ್ಯಾಯಾಲಯಲಗಲ್ಲಿ ನಿರ್ಣಯ ಆಗಿದೆ ಎಂದರೆ ಸಾಕ್ಷಿ ಅದು ಎಲ್ಲರಿಗೂ ಜಂಟಿಯಾಗಿ ಮಂಜೂರಾಗಿತ್ತು ಎಂದು ನುಡಿಯುತ್ತಾರೆ.

ಸೈದಪ್ಪ ಮತ್ತು ಬಸಪ್ಪ ಹಾಗೂ ಅವರ ವಾರಸುದಾರರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಸಿಗುವುದಿಲ್ಲ ಎಂದು ನನ್ನ ಮೂಲಕ ಈ ದಾವೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಜುಮೀನಿನಲ್ಲಿ ಹುರಳಿ ಮತ್ತು ಗೋವಿನಜೋಳ ಬೆಳೆದಿದ್ದೇನೆ. ನಾನೇ ಕಬ್ಜಾ ಇದ್ದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ದಾವಾ ಜಮೀನಿಗೆ ಸಂಬಂದಿಸಿದ ಕರ ನಾನೇ ಪಾವತಿಸಿದ್ದೇನೆ ಆದರೆ ರಶೀದಿ

ಹಾಜರುಪಡಿಸಿಲ್ಲ. ನನ್ನ ತಂದೆಗಾಗಲಿ, ಆತನ ಮರಣಾನಂತರ ಆತನ ವಾರಸುದಾರರಾದ ನಮಗಾಗಲಿ ದಾವಾ ಜಮೀನಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪ್ರತಿವಾದಿ ನಂ.20 ರಿಂದ 26 ರ ಪರ ವಕೀಲರೂ ಮೇಲಿನ ಪಾಟೀ ಸವಾಲನ್ನೆ ಅಳವಡಿಕೊಂಡಿರುತ್ತಾರೆ.**

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು

ಮುಧೋಳ.

ಸಾಕ್ಷಿಯ ಸಹಿ